MYSORE LEGISLATIVE ASSEMBLY

Friday, 22nd December 1967.

The House met in the Assembly Chamber, Vidhana Soudha, Bangalore, at Twelve of the Clock.

MR. SPEAKER [SRI B. VAIKUNTA BALIGA., B.A., B.L.] in the Chair,

---

DISCUSSION OF THE SCARCITY CONDITIONS IN THE STATE

(Debate contd.)

ಶ್ರೀ ಬಿ. ವಿ. ನಾರಾಯಣಸ್ವಾಮಿ (ಶ್ರೀನಿವಾಸಪುರ).—ನ್ಯಾಯವಿ, ನನ್ನ ಅಭಿಪ್ರಾಯ ಹೇಳಿ ತಿಯ ವಿಷಯದಲ್ಲಿ ಪ್ರಸ್ತಾಪ ಮಾಡಿದಾಗ ನನಗೆ ಅವಕಾಶ ಕೊಡುವುದಾಗಿ ಹೇಳಿದಿರಿ.....

ಅಧ್ಯಕ್ಷರು.—ಇವೊತ್ತು ಅವಕಾಶ ಕೊಡುತ್ತೇನೆಂದು ಒಪ್ಪಿಕೊಂಡಿದ್ದೆನೋ?

ಶ್ರೀ ಎಸ್. ಎಸ್. ಅರಕೇರಿ (ಬಳ್ಳಾರಿ).—ಸ್ಪೀಕರ್ ನಾವು ಜನ ಹಾಗೆಯೇ ಉಳಿದಿದ್ದಾರೆ.

ಅಧ್ಯಕ್ಷರು.—ಸ್ಪೀಕರು ಹಾಗೆಯೇ ಉಳಿದಿದ್ದಾರೆಯೇ? (ನಗು)

Sri S. S. ARAKERI.—The usual convention is that those who have not spoken are given an opportunity to continue.

Mr. SPEAKER.—I was really not happy yesterday to deny opportunities for members to speak but I must apologise to the Food Minister for he had to go on listening to the debate for nearly 5 hours continuously.

Sri S. S. ARAKERI.—Important points have to be brought to the notice of the Hon'ble Minister.

Mr SPEAKER.—If you had been a little tactful, some more members would have got a chance yesterday. The hon'ble members may even now give their points I will see that they are embodied in the proceedings and reported in the press also. If I reopen, the whole thing goes on wrong lines. I did not promise yesterday that I would give them a chance today. If I had promised, then I would have seen that it was included in the agenda today.

ಶ್ರೀ ಎನ್. ಎ. ಚನ್ನಿಗಪ್ಪ (ಸಂಡೂರು).—ನಾವು ಬರೆದು ಕಳಿಸುವುದಾದರೆ ಕಾರ್ಯ ಕಲಾಪಗಳಲ್ಲಿ ಏನೆ ಭಾಗವಹಿಸಬೇಕು ಸ್ವಾಮಿ?

ಅಧ್ಯಕ್ಷರು.—ಸ್ನೇಹಿತರೊಬ್ಬರಾಗಿ ನನ್ನನ್ನು ಅವರು ಕರೆದಿದ್ದಾರೆ. ನೀವು ಧಾರವಾಡದಲ್ಲಿ ಇದ್ದರೆ ಅವರಿಗೆ ನೀವು ಜವಾಬು ಕೊಡಬೇಕಾಗುತ್ತದೆ. One of the members came and told me that those who comply with the rules are not getting proper attention and that those who resort to some sort of rough methods are getting attention.

Sri S. S. ARAKERI.—That is my complaint also; I always get the last chance.

Mr. SPEAKER.—Let them complain; I don't mind. The hon'ble Member is interfering with the work posted for today. There must be a limit to it. I think the hon'ble Member has received more chances than anybody else. Is there not a method? If the hon'ble Member wants, let him put everything in writing even in regard to my not discharging the duties properly. I will take note of it. Simply because the hon'ble Member gets up half a dozen times I must allow him; I won't allow him. Even now let him give whatever he wants in writing and I will see that the reply is read over. We must draw a line somewhere. By persisting like this, the hon'ble Member is not going to improve his position or the position of the House.

Sri B. L. NARAYANASWAMY.—May I point out to you, Sir, that you were kind enough to assure me that I will get a chance immediately after the Food Minister's reply. So, I am entitled to it.

Mr. SPEAKER.—I said that the hon'ble Member would get a chance yesterday and not today.

Sri B. L. NARAYANASWAMY.—The debate is still unconcluded.

Mr. SPEAKER.—It is concluded so far as I am concerned. If the House desires I have no objection to reopen it. The hon'ble Member is eating into today's work. We have an important motion before the House today. Let them not find fault with me afterwards.

Sri B. L. NARAYANASWAMY.—It is quite unfair that a debate on an important subject like scarcity conditions is to be concluded without Hon'ble Revenue Minister's reply. This will be a very bad precedent. So, as a protest I walk out.

Mr. SPEAKER.—If the hon'ble Member protests against my conduct, I will certainly hold him responsible for the contempt of the House. If he has any grievance against anybody else it is not for me to answer.

Sri B. L. NARAYANASWAMY.—It is not against the Hon'ble Speaker. I have the greatest respect for you, Sir; I am protesting against the way the proceedings are conducted. Are we not prevented from discharging our duties?

ಶ್ರೀ ಸದಾಶಿವಪ್ಪ ಪಾಟೀರ್ (ಚಿತ್ತಾಪುರ).—ಅಭಾವ ಪರಿಸ್ಥಿತಿ ಬಗ್ಗೆ ಚರ್ಚೆಮಾಡಲು ಎಲ್ಲ ಜಿಲ್ಲೆಗಳಿಂದಲೂ ಅವಕಾಶ ಕೊಡಬೇಕು.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಡಿವಿಜನಲ್ ಕಮೀಷನರುಗಳು ಮತ್ತು ಡೆಪ್ಯುಟಿ ಕಮೀಷನರುಗಳನ್ನಾ ಸೇರಿದ್ದಾರೆ, ಅವರೊಂದಿಗೆ ವ್ಯವಹರಿಸಿ ಒಂದು ವ್ಯವಸ್ಥೆ ಮಾಡಿದರೆ ಒಳಿಯದು. The Revenue Minister is here; should he not give an assurance?

Mr. SPEAKER.— Government is bound to take note of whatever is said on the floor of this House. If any action is required to be taken, I will certainly direct the Government to take note of everything that merits attention and to do whatever is necessary for the benefit of the people. Otherwise, why do the Government, the Legislature and myself exist ? We are here to serve the people.

Sri B. L. NARAYANASWAMY.—They have not risen to the situation when the people are starving without food and drinking water.

Sri B. RACHAIAH (Minister for Revenue and Forests).—Sir, may I reply ?

Mr. SPEAKER.—Yes.

ಶ್ರೀ ಬಿ. ರಾಚಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಈ ಮಾನ್ಯ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದಿ ರಾಗಿ ಎರಡೂ ಪಕ್ಷಗಳಲ್ಲಿರುವವರೂ ಸಂಸ್ಥಾನಾವಳಿ ಇರುವ ಕಷ್ಟ ಪರಿಸ್ಥಿತಿಯನ್ನು ಬಹಳಮಟ್ಟಿಗೆ ನಮಗೆಲ್ಲರಿಗೂ ಕೂಡ ಅರ್ಥವಾಗುವ ರೀತಿಯಲ್ಲಿ ತಿಳಿಸಿದ್ದಾರೆ. ಮಳೆಯು ಅಭಾವದಿಂದ ಸಕಾಲಕ್ಕೆ ಸರಿಯಾಗಿ ಮಳೆಯಾಗದೆ ಈ ವರ್ಷವೂ ಕೂಡ ಸಂಸ್ಥಾನದ ನಾನಾ ಭಾಗಗಳಲ್ಲಿ ರೈತರು ಕಷ್ಟಕ್ಕೀಡಾಗಿದ್ದಾರೆ, ಅವರಿಗೆ ಸರಕಾರದವರು ಆದಷ್ಟು ಬೇಗ ನೆರವು ನೀಡಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದೇ ಬಹುಶಃ ಎಲ್ಲರ ಮೂಲ ಉದ್ದೇಶ. ನಾನು ಈ ಮಾನ್ಯ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟ ಉದ್ದೇಶವಾದರೂ ಕೂಡ ಸರಕಾರದವರು ಇಂಥ ಕಷ್ಟ ಪರಿಸ್ಥಿತಿಯಲ್ಲಿ ಸುಮ್ಮನೆ ಕೂಳಿತಿಲ್ಲ, ಸ್ವಲ್ಪಮಟ್ಟಿಗೆ ಸಂಸ್ಥಾನಾದ್ಯಂತ, ಪ್ರವಾಸ ಮಾಡಿ ಇರುವ ಪರಿಸ್ಥಿತಿಯನ್ನ ತಿಳಿದಿದ್ದೇವೆ ಮತ್ತು ಮಾನ್ಯ ಸದಸ್ಯರು ಕೊಟ್ಟ ವಿವರಗಳನ್ನು ಕೂಡ ಓದಿ ಅರಿವು ಮಾಡಿಕೊಂಡಿದ್ದೇವೆ, ಇದರ ಜೊತೆಗೆ ಈಗಿರುವ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯಲ್ಲಿ ಏನು ಕೆಲಸಕಾರ್ಯ ತೆಗೆದುಕೊಳ್ಳಬಹುದೋ ಮತ್ತು ನಮ್ಮ ಆಯವ್ಯಯಪಟ್ಟಿಯಲ್ಲೇನು ಹಣವನ್ನು ವಿವಿಧ ಇಲಾಖೆಗಳಿಗೆ ಕೊಟ್ಟಿದ್ದೇವೆ ಅದನ್ನು ಖರ್ಚಾ ಮಾಡದೆ ಸಂಬಂಧಪಟ್ಟ ಭಾಗಗಳಲ್ಲಿ ಖರ್ಚು ಮಾಡಬೇಕು ಎಂಬ ಉದ್ದೇಶದಿಂದ ಬಜೆಟ್ಟಿನಲ್ಲಿರುವ ಪ್ಯೂನರ್ ಇರಿಗೇಷನ್ ಬಾವಿ ತೋಡಿಸುವುದು, ಸಾಯಿಲ್ ಕನ್ಸರ್‌ವೇಷನ್, ಪರಿಹಾರ ಕಾಂಗಾರಿ ಮುಂತಾದುವನ್ನು ತೆಗೆದುಕೊಳ್ಳುವುದಕ್ಕೆ 64 (ಬಿ) ಫಾಮಿನ್ ಕಡ್ಡಿನಲ್ಲಿ ಕೊಟ್ಟಿರುವುದು ಇವನ್ನೆಲ್ಲಾ ಒಟ್ಟುಗೂಡಿಸಿ ಕೊಟ್ಟಿರುವ ಉದ್ದೇಶವಾವುದೂ ಇವನ್ನೆಲ್ಲಾ ವೇಗದಿಂದ ಕಾರ್ಯಗತವಾಡಬೇಕು ಎಂಬ ಉದ್ದೇಶದಿಂದ ತಕ್ಕ ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ತಿಳಿಸುವುದಕ್ಕೆ. ಮಳೆ ಅಭಾವದಿಂದ ಜನತೆಗೆ ಕಷ್ಟವಾಗಿರುವ ಕಡೆ ಅವರಿಗೆ ಜೀವನ ನಡೆಯಬೇಕು ಎಂಬ ದೃಷ್ಟಿಯಿಂದ ಅಧಿಕಾರಿಗಳಿಗೆ ಇಂಥ ಕಡೆ ಹಣ ಕೂಡಲಾಗಿದೆ, ಈ ರೀತಿ ಖರ್ಚುಮಾಡಿ ಎಂದು ತಿಳಿಸಿದ್ದೇವೆ ಇದರ ಜೊತೆಗೆ ಇದ್ದ ತೊಡಕುಗಳನ್ನೂ ಸಹ ಪರಿಹಾರಮಾಡಿ ಕಲವಾರು ನಿಯಮಗಳನ್ನೂ ಕೂಡ ಸಡಿಲುಮಾಡಿ ಸರಕಾರದಿಂದ ಸೂಚನೆ ಕೊಡಲಾಗಿದೆ. ಒಹಳ ಮುಖ್ಯವಾಗಿ 65-66ನೆಯ ಸಾಲಿನಲ್ಲಿ ಮಳೆಯಾಗಿಲ್ಲ, ಅನೇಕ ಕಡೆ ಬೆಳೆಯಾಗಿಲ್ಲ, 66-67 ರಲ್ಲಿ ಕಲವು ಭಾಗಗಳಲ್ಲಿ ಮಳೆಬೆಳೆಯಾಗಿದೆ. ಸಂಸ್ಥಾನದ ಬೇರೆಬೇರೆ ಭಾಗಗಳಲ್ಲಿ ರಿಮಿಷನ್ ಕೊಡುವ ಕಾಯಿದೆ ವಿವಿಧ ರೀತಿಯಲ್ಲಿತ್ತು. ಅದುದರಿಂದ ಏಕರೂಪದಲ್ಲಿರುವಂತೆ ಮಾಡಿ ಆ ಮೂಲಕ ಪರಿಹಾರ ಕೊಡಬೇಕೆಂಬ ಉದ್ದೇಶದಿಂದ ಕಳೆದ ಶಾಸನಸಭೆಯಲ್ಲಿ ವಿರೋಧ ಪಕ್ಷದವರು ಮಾತ್ರ ಇತರರು ಈ ಕಾನೂನನ್ನು ಸಮನ್ವಯಮಾಡಿ ಅದರ ಮೂಲಕ ಬೇಗ ಪರಿಹಾರ ಕಾರ್ಯಕ್ರಮ ತೆಗೆದುಕೊಳ್ಳಲು ಭಾವನೆ ಕೊಡಬೇಕೆಂದು ಹೇಳಿದರು. ಅದರ ಪ್ರಕಾರ ಈ ಶಾಸನ ಸಭೆಯಲ್ಲಿ ರಿಮಿಷನ್ ಕೊಡುವ ಕಾನೂನನ್ನು ಆದಷ್ಟು ಬೇಗ ಸಮನ್ವಯಮಾಡಿ ಪ್ರಕಟಿಸಿ ಅದರ ಮೂಲಕ 65-66 ರಿಂದ ಎಲ್ಲಿ 4 ಆಣೆಗಿಂತ ಬೆಳೆ ಕಡಿಮೆಯಾಗಿದೆ ಎಲ್ಲಿ ರಟ್ರಾಸ್ಪೆಕ್ಟಿವ್ ಎಫೆಕ್ಟ್ ನಿಂದ ಪರಿಹಾರ ಕೊಡುವುದಕ್ಕೆ ಪ್ರಯತ್ನಮಾಡಿ ರೂಲ್ಸ್ ಪಬ್ಲಿಷ್‌ಮಾಡಿ ಅದಕ್ಕೆ ಆರೋಪಗಳು ಬಂದಿವೆ. ಜನವರಿ 7 ನೆಯ ತಾರೀಖಿಗೆ ಅವಧಿ ಮುಗಿಯಬಹುದು. ಈ ವರ್ಷ ಬೆಳೆ ಸಾಕಷ್ಟು ಆಗಿಲ್ಲ, 4 ಆಣೆಗಿಂತ ಅಥವಾ 6 ಆಣೆಗಿಂತ ಕಡಮೆ ಬೆಳೆಯಾಗಿರುವ ಕಡೆ ರೈತರಿಗೆ ಕಂದಾಯ ಕೊಡುವುದಕ್ಕಾಗುವುದಿಲ್ಲ, ಅಂಥ ಕಡೆ ಕಂದಾಯ ವಸೂಲುಮಾಡಬಾರದು ಎಂದು ಅದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡಲಾಗಿದೆ. ಅದು ಸರಕಾರದವರಿಗೂ ಖರ್ಚಿಲ್ಲದಿಲ್ಲ ಎಂದು ಸರ್ಕಾರ್ಯಲರ್ ಕೂಡ ಕಳಿಸಿದೆ. ಇದರ ಜೊತೆಗೆ ಪರಿಹಾರ ಕಾರ್ಯ ತೆಗೆದುಕೊಳ್ಳುವ ಕಾಲದಲ್ಲಿ ಹಿಂದೆ ಲಬರಲೈಜ್ಡ್ ಸ್ಕೀಂನಲ್ಲಿ ಟಾವಿ ತೋಡಿಸಲು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದೇವೆ.

(ಶ್ರೀ ಬಿ. ರಾಜಯ್ಯ)

ಇದರಲ್ಲಿ ಕೆಲವು ಬಾವಿಗಳನ್ನು ಸಂಪೂರ್ಣವಾಗಿ ಆಳಪಡಿಸಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ರೈತರಿಗೆ ಸಾಧ್ಯವಾಗಲಿಲ್ಲ. ಅವಧಿ ಮುಗಿಯುವುದಕ್ಕಿಂತ ಮುಂಚೆಯೇ ಬಾವಿ ಪೂರ್ತಿಯಾಗಬೇಕೆಂಬ ತಗಾದೆ ಬಂದಿದೆ ಎಂದು ತಿಳಿದ್ದರಿಂದ ಅವಧಿಯನ್ನೇ ಮುಂದೂಡಿ ರೈತರು ಮತ್ತೆ ಬಾವಿಗಳನ್ನು ಆಳಪಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶವನ್ನು ಸಾರ್ಥಕವಾಗುವ ರೀತಿಯಲ್ಲಿ ಕಾಲ ವಿಸ್ತರಿಸಬೇಕೆಂದು ಅನೇಕ ಸದಸ್ಯರು ತಿಳಿಸಿದರು ; ಆದರ ಪ್ರಕಾರ 6 ರ ಮಾರ್ಚ್‌ವರೆಗೂ ಕೂಡ ಕಾಲಾವಧಿಯನ್ನು ಮುಂದೂಡುತ್ತೀವೆ ಮತ್ತು ಅವರಿಗೆ ಬೇಕಾಗಿರತಕ್ಕ ಹಣವನ್ನೂ ಕೂಡ ಹೆಚ್ಚಿಸಿ 44 ಲಕ್ಷ ರೂಪಾಯಿಗಳಷ್ಟು ಹಣವನ್ನು ಕೊಟ್ಟು ಬಾವಿ ಆಳಪಡಿಸಿ ನೀರನ್ನು ಉಪಯೋಗಿಸಿಕೊಳ್ಳತಕ್ಕ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿದ ಈ ಕೆಲಸವನ್ನೂ ಕೂಡ ಮಾಡಿದ್ದೇವೆ. ಇದರ ಜೊತೆಗೆ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ಯಾವ ಪಜಿ ಯುಂಗ ಮಾಡಬೆ ಕು ಎಂಬ ಪ್ರಶ್ನೆ ಬಂದಿದೆ. ರಫನ್ಯೂ ಏಸೂಲು ಮಾಡುವುದಕ್ಕೆ ಅನೇಕ ಕಡೆ ರೆವಿನ್ಯೂ ಅಧಿಕಾರಿಗಳಿಗೆ ಕಾರಾವ ಕಾಶವಿಲ್ಲದೇ ಇರುವಾಗ ಅವನು ಪ್ರತಿತಿಂಗಳಾನಾಮಿನರ್ ರೋಲ್ ಮೇಂಟೆನೆನ್ ಮಾಡಿ ಜನಕ್ಕೆ ಕೂಲಿ ಕೊಡತಕ್ಕ ವ್ಯವಸ್ಥೆ ಮಾಡಲು ಕಷ್ಟವಾಗುತ್ತದೆ ಎಂದು ಹೇಳಿ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳ ಒಂದು ಕೋ ಆರ್ಡಿನೇಷನ್ ಕಮಿಟಿ ಮಾಡಿಸಿ, ಅವರೆಲ್ಲಾ ಸೇರಿ ಆ ತಾಲ್ಲೂಕಿನಲ್ಲಿ ಏನು ಕಷ್ಟ ಪರಿಸ್ಥಿತಿ ಇದೆ ಎಂಬುವುದನ್ನು ಅರಿತುಕೊಂಡು ಕೆಲವು ಕೆಲಸಕಾರ್ಯಗಳನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಲಾಯಿತು. ಡಿಸ್ಟ್ರಿಕ್ಟ್ ರಿಲೀಫ್ ಕಮಿಟಿಯಲ್ಲಿ ಖಾಸಗಿ ಜನ ಇದ್ದಾರೆ, ಮೇಲಣ ಮನೆಯ ಸದಸ್ಯರು, ತಾಲ್ಲೂಕು ಬೋರ್ಡಿನ ಅಧ್ಯಕ್ಷರು, ತಹಸೀಲ್ದಾರರು, ಅಸಿಸ್ಟೆಂಟ್ ಇಂಜನಿಯರು, ಬಿ. ಡಿ, ಓ, ಗಳು, ಎಂ. ಎಲ್. ಎ. ಗಳು ಎಲ್ಲರೂ ಇದ್ದಾರೆ.

ಶ್ರೀ ಎಚ್. ಬಿ. ಹಳ್ಳಾಲಯ್ಯ (ಹಾಸನ). —ದುರ್ಭೀನಾದರೂ ಹಾಸ್ಕಿ ಮಾಡುತ್ತೀರಾ ?

ಶ್ರೀ ಬಿ ರಾಜಯ್ಯ.—ಇಷ್ಟೆಲ್ಲಾ ಮಾಡುವ ಉದ್ದೇಶ ಅದೇ, ಕೆಲವರು ಹೇಳಿದರು ಡೆಪ್ಯೂಟಿ ಮಿನಿಸ್ಟರು ಧಾರವಾಡದ ಕಡೆಯವರು ಇದ್ದಾರೆ, ಅವರ ತಾಲ್ಲೂಕಿನಲ್ಲಿ ಕೆಟ್ಟನ ಅನುಕೂಲ ಮಾಡಿ ಕೊಂಡಿದ್ದಾರೆ ಎಂಬುವಾಗಿ ಒಬ್ಬಿಬ್ಬರು ಹೇಳಿದರು, ಬರ ಬರುವುದು ಕಾಂಗ್ರೆಸ್‌ನವರು ಇರತಕ್ಕ ಊರಿಗೆ, ಅಥವಾ ವಿರೋಧ ಪಕ್ಷದವರು ಇರತಕ್ಕ ಊರಿಗೆ ಎಂದು ಬರುವುದಿಲ್ಲ. ಅದು ಬಂದಾಗ ಎಲ್ಲರಿಗೂ ಬರುತ್ತದೆ. ಆ ಭಾವನೆ ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲ ಅನ್ನುವುದನ್ನು ಹೇಳುತ್ತಾ ಇದ್ದೇನೆ. ಎಲ್ಲಾ ಕಡೆಯಲ್ಲೂ ಕೂಡ ಕಷ್ಟ ಬಂದಿರತಕ್ಕ ಕಾಲದಲ್ಲಿ ಸರ್ಕಾರದ ಹಣ ಖರ್ಚಾಗುತ್ತದೆ ಎಂಬುದನ್ನು ನೋಡದೇ ಎಲ್ಲ ಅತ್ಯವಶ್ಯಕವೋ ಅಲ್ಲಿ ಖರ್ಚು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಎರಡು ಮೂರು ದಿವಸಗಳಿಂದ ಡಿವಿಜನಲ್ ಕಮಿಷನರು, ಮತ್ತು ಡೆಪ್ಯುಟಿ ಕಮಿಷನರು ಮಾತುಗಳನ್ನು ಇಲ್ಲಿಯೇ ಕೇಳಿದ್ದೇನೆ, ಬಹುಶಃ ಮಾನ್ಯ ಸದಸ್ಯರು ಶಾಸನ ಸಭೆಯ ಕೆಲಸ ಬಿಟ್ಟು ಅಲ್ಲಿಗೆ ಏಕೆ ಹೋದರು ಎಂದು ಆಕ್ಷೇಪಣೆ ಮಾಡಿರಬಹುದು. ಆ ನಿಟ್ಟಿನಲ್ಲಿ ಇದ್ದ ವಿಷಯ ಕ್ಷಾಮ ಪರಿಹಾರ ಕಾರ್ಯ ಎಷ್ಟುಮಟ್ಟಿಗೆ ನಡೆದಿದೆ, ಮತ್ತು ಸರ್ಕಾರದವರು ಡೈರೆಕ್ಷನ್ ಏನು ಕೊಟ್ಟಿದ್ದಾರೆ ಆ ಪ್ರಕಾರ ಮಾಡಿದ್ದಾರೆಯೇ ಇಲ್ಲವೇ ಕೊಟ್ಟರತಕ್ಕ ಹಣವನ್ನು ಖರ್ಚು ಮಾಡಿದ್ದಾರೆಯೇ ಇಲ್ಲವೇ ಎಂಬ ಎಲ್ಲಾ ವಿಷಯಗಳನ್ನೂ ಚರ್ಚೆ ಮಾಡಿ ಕೆಲಸ ಮಾಡಬೇಕೆ ಇದ್ದರೆ ಇನ್ನೂ ಹುರುಪಾಗಿ ಕೆಲಸ ಮಾಡಬೇಕು ಎಂಬ ದೃಷ್ಟಿಯಿಂದ ಅಲೋಚನೆ ಮಾಡಲಾಯಿತು. ಈ ಎಲ್ಲಾ ಇಲಾಖೆಗಳಿಗೂ ಕೊಟ್ಟ ಹಣ ಎಲ್ಲಾ ತಾಲ್ಲೂಕುಗಳಲ್ಲೂ ಖರ್ಚಾಗಿಲ್ಲ. ಮೈಸೂರು ಜಿಲ್ಲೆಯಲ್ಲಿ ಟಿ. ನರಸೀಪುರದಲ್ಲಿ, ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಬತ್ತದ ಬೆಳೆ ಬರುವುದು ಆಗುತ್ತಾ ಇದೆ, ಆದ್ದರಿಂದ ಜನರು ಅಲ್ಲಿಗೆ ಹೋಗುತ್ತಾರೆ ಆದ್ದರಿಂದ ನೀವು ಕೊಡತಕ್ಕ 1-30 ಪೈಸೆ ಗಂಡು ಆಳಿಗೆ, 1 ರೂಪಾಯಿ ಹೆಣ್ಣು ಆಳಿಗೆ ಸಾಲುವುದಿಲ್ಲ, ಆ ದೃಷ್ಟಿಯಿಂದ ಬರುವುದಿಲ್ಲ ಎಂದು ಅಧಿಕಾರಿಗಳು ಹೇಳಿದರು. ಹೆರಿಯ ಕಟ್ಟಣದ ಹತ್ತಿರ, ಕೊಡಗಿನಲ್ಲಿರತಕ್ಕ ಕಾಫಿ ತೋಟಗಳಲ್ಲಿ ಎರಡು ರೂಪಾಯಿಗಿತ ಹೆಚ್ಚು ಕೂಲಿ ಸಿಕ್ಕುತ್ತದೆ ಆದ್ದರಿ ದ ಅಲ್ಲೂ ಕೂಡ ಬರುತ್ತಿಲ್ಲ ಎಂದರು, ಅವೇ ರೀತಿ ತಾನಜಿಲ್ಲೆಯ ಸಕಲೇಶಪುರದ ಭಾಗದಲ್ಲೂ ಕೂಡ ಜನರು ಕಾಫಿ ತೋಟಗಳಿಗೆ ಹೋಗುತ್ತಾರೆ, ಅಲ್ಲಿ ಹೆಚ್ಚಾಗಿ ಕೂಲಿ ಸಿಕ್ಕುತ್ತಾ ಇದೆ. ಆದುದರಿಂದ ಬರುವುದಿಲ್ಲ. ನಿಮ್ಮ ಹಣವನ್ನು ಖರ್ಚು ಮಾಡುವುದು ಕಷ್ಟವಾಗಿದೆ ಎಂದು ತಿಳಿಸುತ್ತಾರೆ. ಅವರು ಎರಡು ರೂಪಾಯಿ ಕೂಲಿ ಕೊಡುತ್ತಾರೆ ಎಂದು ಹೇಳಿ ನಾವು ಕೂಡ ಎರಡು ರೂಪಾಯಿಗೆ ಕೂಲಿಯನ್ನು ಏರಿಸಿದರೆ ಅದು ಕ್ಷಾಮ ಪರಿಹಾರ ಕಾರ್ಯವಾಗುವುದಿಲ್ಲ, ಎಲ್ಲೂ ಬೇರೆ ಕಡೆ ಕೆಲಸ ಜನಗಳಿಗೆ ಸಿಕ್ಕುವುದಿಲ್ಲ ಬಹಳ ಕಷ್ಟದಲ್ಲಿರುವಾಗಿದೆ ಎಂದು ಕಂಡು ಬರತಕ್ಕ ಕಡೆ ಇಂತಹ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಈ ಹಣವನ್ನು ಒದಗಿಸಿದ್ದೇವೆ, ಆದ್ದರಿಂದ

ಇದನ್ನು ಖರ್ಚು ಮಾಡಲಿಲ್ಲ. ಒಂದು ದಿವಸಕ್ಕೆ 5 ಲಕ್ಷ ರೂಪಾಯಿಗಳನ್ನಾದರೂ ಕೂಡ ಖರ್ಚು ಮಾಡಬೇಕೆಂದು ಶ್ರೀಮಾನ್ ಶಿವಪ್ಪನವರು ಹೇಳಿದರು, ಹಣಕ್ಕೇನು ಕೊರತೆ ಇರಲ್ಲಾ ಎಂದು ಇಷ್ಟು ಮಾತ್ರ ಹೇಳಬಲ್ಲೆ. ಎಲ್ಲೆಲ್ಲಿ ರಿಲೀಫ್ ಮಾಡಬೇಕೆಂದು ಯೋಜನೆಯನ್ನು ಸಿದ್ಧಪಡಿಸಿಕೊಂಡಿದ್ದಾರೋ ಆ ಕೆಲಸವನ್ನು ಪ್ರಯಾರಿಟಿ ಪ್ರಕಾರ ಮಾಡುವುದಕ್ಕೆ ಸರ್ಕಾರದವರು ಹಣವನ್ನು ಒದಗಿಸಿಕೊಡುತ್ತೇವೆ. ಎಲ್ಲಿಯವರೆಗೆ ಕಷ್ಟ ಪರಿಹಾರವಾಗಬೇಕಾಗುತ್ತದೆ ಅಲ್ಲಿಯವರೆಗೂ ಇಂತಹ ಕೆಲಸಗಳನ್ನು ಪ್ರಾರಂಭಿಸಲೇ ಬೇಕು, ಜನಗಳಿಗೆ ಕೆಲಸ ಒದಗಿಸಲೇ ಬೇಕು. ಸುಮಾರು 44 ಲಕ್ಷ ರೂಪಾಯಿಗಳನ್ನು ಹಣವನ್ನು ನಾಯಿಲ್ ಕನ್ಸರ್ವೇಷನ್‌ಗೆ ತೆಗೆದಿಟ್ಟಿದ್ದೆವು ಅದು ಖರ್ಚಾಗಿಲ್ಲ. ಫ್ಯಾಮಿಲಿ ಇಂಪ್ರೂವ್‌ಮೆಂಟ್ ಲೋನು, ತಕ್ಕಾವಿ ಲೋನಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳವರೆಗೂ ಕೊಟ್ಟಿದ್ದೇವೆ, ಇನ್ನೂ ಆ ಹಣ ಖರ್ಚಾಗಿಲ್ಲ. ಹಾಗೆಯೇ ಬಾವಿ ಆಳಪಡಿಸುವುದಕ್ಕೆ 44 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು ಅದೂ ಕೂಡ ಖರ್ಚಾಗಿಲ್ಲ. ಬತ್ತೆಯನಲ್ಲಿ ಈ ಫ್ಯಾಮಿನ್ ರಿಲೀಫ್‌ಗೆ ಕೊಟ್ಟಿರತಕ್ಕ 25 ಲಕ್ಷ ರೂಪಾಯಿಗಳ ಜೊತೆಗೆ ಕಂಟಿಂಜನ್ಸಿ ಫಂಡ್‌ನಿಂದ ಮೊನ್ನೆತಾನೆ 9 ಲಕ್ಷ ರೂಪಾಯಿಗಳನ್ನು ಮುಂಜೂರು ಮಾಡಿ ಕೊಟ್ಟಿದ್ದೇವೆ. ಜನಗಳಿಗೆ ಬೇರೆ ರೀತಿಯಿಂದ ಕೂಲಿ ಹೆಚ್ಚಿಗೆ ಸಿಕ್ಕುತ್ತಾ ಇದ್ದುದರಿಂದ ಅಷ್ಟರ ಮಟ್ಟಿಗೆ ಈ ಕೆಲಸಗಳಿಗೆ ಬರುತ್ತಾ ಇರಲಿಲ್ಲ, ಆದ್ದರಿಂದ ಹಣ ಖರ್ಚಾಗಿಲ್ಲ ಎಂದು ಅಧಿಕಾರಿಗಳು ವರದಿ ಮಾಡಿದ್ದಾರೆ. ವಾಸ್ತವ ನಾನು ಹೋದ ಕೆಲವಾರು ಕಡೆಗಳಲ್ಲಿ ಪಿ.ಡಬ್ಲ್ಯೂ.ಡಿ ಕೆಸರ ಕಾರ್ಯಗಳನ್ನು ತೆಗೆಯುತ್ತಾ, ಇರುವ ಕಡೆ ಹೆಚ್ಚಿನ ಕೂಲಿ ಸಿಕ್ಕುತ್ತಾ ಇದೆ, ಆದ್ದರಿಂದ ಈ ಕ್ಷಾಮ ಪರಿಹಾರ ಕಾರ್ಯಗಳಲ್ಲಿ ಹೆಚ್ಚು ಜನ ಭಾಗವಹಿಸುತ್ತಿಲ್ಲ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ನೀವು ಕೊಡುವ ಕೂಲಿ ಅರ್ಧ ಹೊಟ್ಟೆಗೆ ಸಾಲುವುದಿಲ್ಲ.

ಶ್ರೀ ಬಿ. ರಾಚಯ್ಯ.—ಈಗಿರತಕ್ಕ ದರ ಗಂಡಾಳಿಗೆ 1-30 ಪೈಸೆ, ಹೆಣ್ಣಾಳಿಗೆ ಒಂದು ರೂಪಾಯಿ, ಹಿಂದಿನ ಫ್ಯಾಮಿನ್ ಕೋಡ್‌ನಲ್ಲಿ ಬಹಳ ಕಡಿಮೆ ಇತ್ತು.

ಶ್ರೀ ದಿಗಂಬರರಾವ್ ಬಿ. ಕಲಮಂಕರ್ (ಅಲಂದ್).—ಮಿನಿಮಂ ವೇಜ್ ಇಷ್ಟೇ ಕೊಡು ಬೇಕೆಂದು ಮಾಡಿದ್ದೀರೋ ಇಲ್ಲವೋ ಅದೇ ರೀತಿ ಇವರಿಗೂ ಮಿನಿಮಂ ವೇಜಸ್ ನಿಗದಿ ಮಾಡಿ.

ಶ್ರೀ ಬಿ. ರಾಚಯ್ಯ.—ಎಲ್ಲಾ ಪರಿಸ್ಥಿತಿಗಳೂ ಹೆನ್ನಾಗಿದ್ದಂತಹ ಕಾಲದಲ್ಲ ಮಿನಿಮಂ ವೇಜಸ್ ಕೊಡಬೇಕೆಂದು ಹೇಳುತ್ತೇವೆಯಿಲ್ಲ ಬೇರೆ ವಿಷಯ. ಇವತ್ತು ಕಷ್ಟದಲ್ಲಿರತಕ್ಕ ಕಾಲದಲ್ಲಿ ಜನರಿಗೆ ಅನ್ನ, ಗಂಜಿಯಾದರೂ ಸಿಕ್ಕಲಿ ಎಂದು ಹೇಳಿ ಈ ಕೆಲಸಗಳನ್ನು ಮಾಡುತ್ತಾ ಇರುವುದು ಎಂಬುದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ತಾವು ಹೇಳುವುದರಲ್ಲಿ ತಿರುಳೂ ಇಲ್ಲ, ಹುರುಳೂ ಇಲ್ಲ.

ಶ್ರೀ ಬಿ. ರಾಚಯ್ಯ.—ನಿಮ್ಮಂತೆ ಶಬ್ದ ರುಚಿಯಾಗಿರತಕ್ಕ ಭಾಷಣ ಮಾಡುವುದಕ್ಕೆ ನನಗೆ ಬರುವುದಿಲ್ಲ, ಇಷ್ಟು ವಿಷಯ ವಾಸ್ತವ ಹೇಳಬೇಕಾಗಿದೆ, ರೈತಾಪಿ ಜನರಿಗೆ ಅನೇಕ ಸಂದರ್ಭಗಳಲ್ಲಿ ಸರಕಾರದಿಂದ ಏವಿಧ ಇರಾಖೆಗಳಿಂದ ಹಣ ದೊರಕುತ್ತಾ ಇದೆ, ಇವತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಹಣ ಸಾಲ ಕೊಡುತ್ತಾ ಇದ್ದಾರೆ, ತಾಲ್ಲೂಕು ಬೋರ್ಡಿನಿಂದ ಕೆಲವು ಸಾಲಗಳನ್ನು ಕೊಡುತ್ತಾ ಇದ್ದಾರೆ, ಸಾಲಗಳನ್ನು ತೆಗೆದುಕೊಂಡು ಬಾವಿಗಳನ್ನು ತೆಗೆಸುತ್ತಾ ಇದ್ದಾರೆ, ಪಂಪ್ ಸೆಟ್ಟುಗಳನ್ನು ಹಾಕುತ್ತಾ ಇದ್ದಾರೆ. ಕ್ಷಾಮ ಪರಿಹಾರ ಕಾರ್ಯ ತೆಗೆದುಕೊಂಡ ಕಾಲದಲ್ಲಿ ಕೂಲಿ ಕಡಿಮೆ ಆವಂತ ಪ್ರಯೋಜನವಾಗುವುದಿಲ್ಲ ಎಂದು ಹೇಳಿ ಹೆಚ್ಚು ಜನ ಬರದೇ ಇರುವುದರಿಂದ ಅದಕ್ಕೆ ಕೊಟ್ಟ ಹಣ ಖರ್ಚಾಗಿಲ್ಲ.

12-30 P.M.

ಹಣ ಖರ್ಚಾಗಲಿಲ್ಲ ಉಳಿಸಬೇಕು ಎಂದು ಹೇಳುವುದು ನನ್ನ ಪ್ರಯತ್ನ ಅಲ್ಲ. ಬಹುಶಃ ಒಂದು ವಾರ ಅದಮೇಲೆ ಬತ್ತದ ಕಯಿಲು ಮುಗಿದಮೇಲೆ ಮುಂದಿನ ಬೆಳೆ ಬರುವವರೆಗೆ ಕಷ್ಟ ಇದೆ. ಆ ಕಾಲದಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಎಲ್ಲಾ ಕಡೆ ತೆಗೆದುಕೊಳ್ಳಬೇಕು. ಎಲ್ಲೆಲ್ಲಿ ಬೆಳೆ ಆಗಿಲ್ಲ ಅಂಥ ಕಡೆ ಕೆಲವು ಯೋಜನೆಗಳನ್ನು ತಯಾರು ಮಾಡಿದ್ದೇವೆ. ಮೈನರ್ ಇರಿಗೇಷನ್ ವರ್ಕ್ಸ್ 1965-66ನೇ ಸಾಲಿನಲ್ಲಿ ಜಿಲ್ಲೆಗೆ ಒಂದೆರಡು ತೆಗೆದುಕೊಳ್ಳಬೇಕು ಎನ್ನುವ ಪ್ರಯತ್ನ ಮಾಡಿದ್ದೇವೆ. ಇದನ್ನು ಪೂರ್ತಿಸಬೇಕು, ಎಲ್ಲಿ ಮಳೆ ಆಗದೆ ಬರಗಾಲಕ್ಕೆ ಈಡಾಗಿದ್ದಾರೆ ಅಂಥ ಕಡೆ ಸಣ್ಣ ಸಣ್ಣ ಯೋಜನೆಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ಉದ್ದೇಶ. ಮೈನರ್ ಇರಿಗೇಷನ್, ಗೋಕಟ್ಟೆಗಳು, ಫಾರಂ ರಿಸೇರ್ವ್ಸ್, ಸ್ಮಾಲ್ಸನ್ ಕಾಮಗಾರಿ ಇಂತಹ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಹಣ ಸಾಕಾಗುವುದಿಲ್ಲ.

(ಶ್ರೀ ಬಿ. ರಾಚಯ್ಯ)

ಪಿ.ಡಬ್ಲ್ಯೂ.ಡಿ. ಇಂಜಿನಿಯರ್ ಇರ್ರಿಗೇಷನ್‌ಗೋಸ್ಕರ ಹಣ ಇಟ್ಟಿದ್ದೇವೆ, ಅದರ ಜೊತೆಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು ಎನ್ನುವ ಯೋಜನೆಯನ್ನು ಅಧಿಕಾರಿಗಳ ಮೀಟಿಂಗ್‌ನಲ್ಲಿ ಸಿದ್ಧಪಡಿಸಿ ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ಇನ್ನೂ ಮುಂದೆ ಹೆಚ್ಚು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ. ಈ ಒಂದು ದೃಷ್ಟಿಯಿಂದ ನಮ್ಮ ಏನಾದರೂ ಮಾಡಿಕೊಳ್ಳಬೇಕು ಇಷ್ಟೆ : ತಮ್ಮ ಕ್ಷೇತ್ರಕ್ಕೆ ಹೋಗುವ ಕಾಲದಲ್ಲಿ ಅದು ಆಗಿಲ್ಲ, ಇದು ಆಗಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಸರ್ಕಾರದ ಆದೇಶ ಏನು ಇದೆ ಅದನ್ನು ಜಾರಿಗೆ ತಂದಿದ್ದಾರೋ ಇಲ್ಲವೋ ನೋಡಬೇಕು. ನಾನು ಬಹಳ ಮನಸ್ಸಿನಿಂದ ಕೇಳಬೇಕಾಗಿದೆ. 'ನೀವು ಹೊಜತ ಕುಟುಂಬದವರ್ನ ಹುಟ್ಟಿ ಕಷ್ಟನಷ್ಟಗಳನ್ನು ಅನುಭವಿಸಿ ಮಂತ್ರಿ ಆದಮೇಲೆ ಬಡವರ ಕಷ್ಟ ಕಾಣುವುದಿಲ್ಲ ಎಂದು ಒಬ್ಬರು ಸದಸ್ಯರು ಹೇಳಿದರು. ಆದರೆ ಒಂದು ಮಾತನ್ನು ಕೇಳುತ್ತೇನೆ. ಬಡವರ ಕಷ್ಟ ಅಷ್ಟು ಬೇಗ ಮರೆಯುವಂಥಾದ್ದಲ್ಲ, ಪತಕ್ಕೆಂದರೆ ಅದು ನಿತ್ಯಜೀವನದಲ್ಲಿ ಕಾಣುತ್ತಾ ಇರತಕ್ಕದ್ದು. ಈ ದೃಷ್ಟಿಯಿಂದ ಅನುಕಂಪ ಇಟ್ಟುಕೊಂಡು ಕೆಲಸ ಮಾಡಲಿಕ್ಕೆ ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲೆಲ್ಲಿ ರೈತರು ಪರಿಹಾರ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿದ್ದಾರೋ ಅಲ್ಲಿ ಅವರಿಗೆ ಗೊತ್ತುಮಾಡಿರತಕ್ಕ ರೂ. 1-3 ಪೈಸೆಗೆ ಅವರಿಗೆ ಅನೇಕ ಕಡೆ ತಲುಪುವುದಿಲ್ಲ ಅದನ್ನು ತಲುಪುವ ಹಾಗೆ ಮಾಡಿಕೊಡಿ ಎಂದು ಅವರ ಕ್ಷೇತ್ರದಲ್ಲಿ ನನಗೆ ಹೇಳಿದರು. ಎಲ್ಲೆಲ್ಲಿ ಈ ರೀತಿ ಬಡವರ ಶೋಷಣೆ ಆಗುತ್ತಿದೆಯೋ ಅಲ್ಲಿ ಏನು ಕೂಲಿ ಕೊಡಬೇಕೆಂದು ಗೊತ್ತುಮಾಡಿದ್ದೇವೋ ಅದನ್ನ ಚಾಚೂ ತಪ್ಪದ ರೀತಿಯಲ್ಲಿ ಅವರಿಗೆ ತಲುಪುವ ಹಾಗೆ ಏರ್ಪಾಡು ಮಾಡಬೇಕು ಎಂದು ಹೇಳಿದ್ದೇನೆ. ಕ್ಷಾಮ ಪರಿಹಾರ ಕಾರ್ಯ ತೆಗೆದುಕೊಳ್ಳುವ ಕಡೆ ಕೂಲಿಗಾರರಿಗೆ 1-30 ಪೈಸೇ ಕೊಡುವುದರಿಂದ ಹೊಟ್ಟೆ ತುಂಬುವುದಿಲ್ಲ ಎನ್ನುವುದು ನಿಜ. ಆದುದರಿಂದ ಅಂಥ ಕಡೆ ಸ್ವಲ್ಪಮಟ್ಟಿಗೆ ಸೊಸೈಟಿ ಮುತ್ತು ಇತರರ ಮುಖಾಂತರ ವ್ಯಾಪಾರ ಮಾಡುವುದನ್ನು ಕಡಿಮೆ ಮಾಡಿ, ಎಲ್ಲೆ ಪರಿಹಾರ ಕಾರ್ಯಕ್ರಮಗಳು ನಡೆಯುತ್ತಾ ಇವೆಯೋ ಅಂಥ ಕಡೆ ಕೂಲಿಗಾರರಿಗೆ ಅರ್ಧದಷ್ಟು ಆಹಾರ ಧಾನ್ಯವನ್ನು ಒದಗಿಸಬೇಕು ಎಂದು ಸೂಚನೆ ಕೊಟ್ಟಿದ್ದೇನೆ. ಶಾಶ್ವತವಾದ ಪರಿಹಾರ ಕಾರ್ಯಕ್ರಮವನ್ನಿಟ್ಟುಕೊಂಡು ಕೆಲಸ ಮಾಡುವುದನ್ನು ಬಿಟ್ಟು ನಂತೆ ಹೊತ್ತಿಗೆ ಮೊಳದುದ್ದ ನೇಯುತ್ತಿದ್ದೀರಿ, ಆ ರೀತಿ ಮಾಡಬೇಡಿ ಎಂದು ಶ್ರೀವರ್ಮಾ ಚೆನ್ನಬಸಪ್ಪನವರು ಮತ್ತು ಸಿದ್ದವೀರಪ್ಪನವರು ತಿಳಿಸಿದರು. ಇಷ್ಟರವರೆಗೆ ಅವರು ಹಾಕಿದ ಹಾದಿಯಲ್ಲೇ ಹೋಗುತ್ತಿದ್ದೇವೆ, ಈಗ ಅದನ್ನು ಬದರಾಯಿಸಬೇಕು ಎಂದು ಕಾಣುತ್ತದೆ. ಅವರು ಏನಾದರೂ ಒಂದು ಶಾಶ್ವತ ಯೋಜನೆ ಹಾಕಿ ಅದನ್ನು ಮುಂದುವರೆಸಿಕೊಂಡು ಹೋಗಿ ಎಂದು ಮಾಡಿದ್ದರೆ ಚೆನ್ನಾಗಿತ್ತು. 270 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಸುಸ್ಥಾ ದಲ್ಲಿ ಎಲ್ಲೆಲ್ಲಿ ಕ್ಷಾಮಕ್ಕೆ ತುತ್ತಾಗತಕ್ಕ ಭಾಗದಲ್ಲಿ ನೀರಾವರಿ ಯೋಜನೆಗಳಿಗೆ ಅವಕಾಶ ಇದೆಯೋ ಎಲ್ಲೆಲ್ಲಿ ಅಂತಹ ನೀರಾವರಿ ಯೋಜನೆಗಳನ್ನು ಶಾಶ್ವತವಾಗಿ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಕೇಂದ್ರ ಸರ್ಕಾರದವರು ಕ್ಷಾಮ ಪರಿಹಾರಕ್ಕೋಸ್ಕರ 40 ಕೋಟಿ ರೂಪಾಯಿಗಳನ್ನು ಮೀಸರವಾಗಿ ಇಟ್ಟಿದ್ದಾರೆ ಎಂದು ಕೇಳಿದ್ದೇನೆ. ಅಂತಹ ಹಣದಲ್ಲಿ ಸಾಯಿಲ್ ಕನ್‌ಸರ್ವೇಷನ್, ಅಫಾರೆಸ್ಟೇಷನ್ ವರ್ಕ್, ಮೈನರ್ ಇರ್ರಿಗೇಷನ್, ಬಾವಿ ತೆಗೆಸುವುದಕ್ಕೆ ಇಂತಹ ಕೆಲಸಕ್ಕೋಸ್ಕರವಾಗಿ ಕೇಂದ್ರ ಸರ್ಕಾರದವರು 10 ಕೋಟಿ ರೂಪಾಯಿಗಳನ್ನು ಒದಗಿಸಬೇಕು ಎಂದು ಪ್ರಾರ್ಥನೆ ಮಾಡುತ್ತಾ ಇದ್ದೇವೆ. ಪರಿಸ್ಥಿತಿ ಇಲ್ಲಿ ಹೇಳುವುದಕ್ಕಿಂತ ಅನೇಕ ಭಾಗದಲ್ಲಿ ಇನ್ನೂ ಹೆಚ್ಚು ಉಲ್ಬಣ ಸ್ಥಿತಿಯಲ್ಲಿ ಇದೆ ಎನ್ನುವುದು ನನಗೆ ವೈಯಕ್ತಿಕವಾಗಿ ಗೊತ್ತಿದೆ. ಅನೇಕ ಸದಸ್ಯರು ಇರತಕ್ಕ ವಿಷಯವನ್ನು ಅಷ್ಟೊಂದು ಕರಿಣವಾಗಿ ಹೇಳಲಿಲ್ಲ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಬಹಳ ಕಡೆ ನೋಡಿದ್ದೇನೆ. ಜನ ಬಹಳ ಕಷ್ಟದಲ್ಲಿದಾರೆ. ಜಿಲ್ಲಾಧಿಕಾರಿಗಳು, ಡಿವಿಷನರ್ ಕಮೀಷನರ್‌ಗಳು ಮತ್ತು ಇತರ ಅಧಿಕಾರಿಗಳು ಯಾರು ಇದ್ದಾರೆ, ಅವರಿಗೆ ಕಾನ್‌ಫರೆನ್ಸ್‌ನಲ್ಲಿ ಹೇಳಿದ್ದೇನೆ ಹಣ ಸಿಕ್ಕಿದ್ದನ್ನು ಖರ್ಚು ಮಾಡಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಐ. ಎ. ಎಸ್. ಅಫೀಸರು ಸಂಬಳ ಹೆಚ್ಚು ತೆಗೆದುಕೊಂಡು, ಸಂಸ್ಥಾನದಲ್ಲಿ ಎಲ್ಲಾ ತೃಪ್ತಿಯಾಗಿದೆ ಎಂದು ಹೇಳಿದರೆ ನಾನು ಒಪ್ಪುವುದಕ್ಕೆ ಸಾಧ್ಯ ಇಲ್ಲ. ನಾನೂ ಒಬ್ಬ ರೈತನ ಮಗನಾಗಿದ್ದೇನೆ ಏನು ತೊಂದರೆ ಇದೆ ಎನ್ನುವುದೂ ನನಗೆ ಗೊತ್ತಾಗುತ್ತಿದೆ, ಹೋದ ಕಡೆಯೂ ತಿಳಿದುಕೊಳ್ಳುತ್ತಿದ್ದೇನೆ ; ಶಾಸನಸಭಾ ಸದಸ್ಯರೂ ಮತ್ತು ಇತರರೂ ಬಂದು ಕಷ್ಟ ಇದೆ ಎಂದು ಹೇಳುವಾಗ ಅವರು ಹೇಳುವುದನ್ನು ತಿಳಿದುಕೊಳ್ಳುತ್ತಿದ್ದೇನೆ, ಬೆಳ್ಳಾವಿ, ಹುಬ್ಬಳ್ಳಿ, ತುಮಕೂರು ಜಿಲ್ಲೆಯ ಕೆಲವು ಭಾಗಗಳು ಕಷ್ಟದಲ್ಲಿ ಇದೆಯೆಂದು ಹೇಳಿದರು. ಅಲ್ಲಾ ನಿಜವಾಗಿಯೂ ಕಷ್ಟಪರಿಸ್ಥಿತಿ ಇದೆ. ಕೋಲಾರ, ಚಿತ್ರದುರ್ಗ ಕೆಲವು ಭಾಗದಲ್ಲಿ ಇದೆ. ಬಿಜಾಪುರದ ಕೆಲವು ಭಾಗವನ್ನೂ ನೋಡಿದ್ದೇನೆ ಮತ್ತು ಜತ್ತಿಯವರ ಕ್ಷೇತ್ರವನ್ನೂ

ನೋಡಿದ್ದೇನೆ. ಬೆಳಗಾಂ, ಧಾರವಾಡ, ಹಾಸನ, ಮೈಸೂರು, ಮಂಡ್ಯ ಎಲ್ಲಾ ಭಾಗಗಳನ್ನೂ ನೋಡಿದ್ದೇನೆ. ಸೌತ್ ಕೆನರಾ ಜಿಲ್ಲೆಯಲ್ಲಿ ಕ್ಷಾಮ ಪರಿಹಾರಕ್ಕೋಸ್ಕರವಾಗಿ ಹಣ ಕೊಡಿ ಎಂದು ಕೇಳುವುದಿಲ್ಲ. ಅಲ್ಲಿ ಏನಾಗಿದೆ ಎಂದರೆ, ಮರಗಳನ್ನು ಬೆಳೆಸಿಟ್ಟುಕೊಂಡಿದ್ದಾರೆ, ಮಳೆ ಸಕಾಲದಲ್ಲಿ ಆಗುತ್ತಾ ಇದೆ, ಬೆಳೆ ಆಗುತ್ತಾ ಇದೆ ಪ್ರವಾಹವೆಂದು ಕೆಲವು ಕಡೆ ಭಾರವನ್ನು ತೊಂದರೆಯಾಗುತ್ತದೆ.

ಶ್ರೀ ಎಂ. ನಾಗಪ್ಪ.—ಹೈದ್ರಾಬಾದ್ ಕರ್ನಾಟಕ ಏತಕ್ಕೆ ನೋಡಲಿಲ್ಲ, ಮಲತಾಯಿ ಧೋರಣೆ ತೋರಿಸುತ್ತಾ ಇದ್ದೀರಿ?

ಶ್ರೀ ಬಿ. ರಾಚಯ್ಯ.—ತೊಡಗಿದ್ದಲ್ಲಿ ಸಾಕಷ್ಟು ಬೆಳೆ ಆಗಿಲ್ಲ, ಕಷ್ಟವಲ್ಲಿದ್ದಾರೆ. ಅಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರೆ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗುತ್ತಾರೆ. ಹೈದ್ರಾಬಾದ್ ಕರ್ನಾಟಕದ ಪರಿಸ್ಥಿತಿ, ಜಾವಗಿ ಈ ಪ್ರದೇಶದಲ್ಲೂ ಕೂಡ ಜನ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಇಲ್ಲಿ ಕೊಟ್ಟಿರತಕ್ಕಂಥ ಪಟ್ಟಿ ಪೂರ್ಣವಾಗಿ ಇಲ್ಲದೇ ಇರಬಹುದು. ಕೆಲವು ತಾಲ್ಲೂಕುಗಳನ್ನು ಏತಕ್ಕೆ ಎಟ್ಟಿದ್ದೀರಿ ಎಂದು ಕೆಲವು ಮಾನ್ಯ ಸದಸ್ಯರು ಅಕ್ಷೇಪಣೆ ಮಾಡಿದರು. ಅದು ನಮ್ಮ ಅಧಿಕಾರಿಯಿಂದ ಬಂದಪಟ್ಟಿ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—16 ಆಣಿ ಬೆಳೆ ಆಗಿದೆ ಎಂದು ಈ ವರ್ಷ ಯಾವುದಾದರೂ ತಾಲ್ಲೂಕಿನಿಂದ ಆಗಲಿ, ಜಿಲ್ಲೆಯಿಂದ ಆಗಲಿ ವರದಿ ಬಂದಿದೆಯೇ?

ಶ್ರೀ ಬಿ. ರಾಚಯ್ಯ.—ಕೆಲವು ಭಾಗಗಳಲ್ಲಿ ಗದ್ದೆ ಬೆಳೆ ಚೆನ್ನಾಗಿ ಆಗಿದೆಯೆಂದು ನನಗೆ ವರದಿ ಬಂದಿದೆ. ಕಂದಾಯವನ್ನು ವಜಾಮಾಡಬೇಕೆಂದು ಹೇಳತಕ್ಕ ಕಾರಣದಲ್ಲಿ ನಾನು ಹೇಳುತ್ತಿರುವುದು ಯಾರು ಅದನ್ನು ಹೊರಬಲ್ಲರೋ ಅಂಥವರ ಮೇಲೆ ಅದನ್ನು ಹಾಕಬೇಕೆಂದು ನಾನು ಹೇಳತಕ್ಕವನಿದ್ದೇನೆ. ಆದರೆ ಸರ್ಕಾರವು ಹೊಸ ತೆರಿಗೆಗಳನ್ನು ಹಾಕುವ ಬೇಡ, ಕಂದಾಯವನ್ನು ತೆಗೆದುಕೊಳ್ಳುವುದು ಬೇಡ, ಆದರೆ ಜನರಿಗೆ ಅನ್ನ ಕೊಡಬೇಕ, ಅವರಿಗೆ ಕೂಲಿ ಕೆಲಸಗಳನ್ನು ಒದಗಿಸಬೇಕು ಅನ್ನುವ ವಾದ ಸಮಂಜಸವಾದುದಲ್ಲ. ತೆರಿಗೆ ಇಲ್ಲದೆ ಯಾರೂ ಸರ್ಕಾರವನ್ನು ನಡೆಸುವುದು ಸಾಧ್ಯವಿಲ್ಲ. ನಾವೀವತ ಯಾರಿಗೆ ತೆರಿಗೆ ಕೊಡತಕ್ಕ ಶಕ್ತಿ ಇದಯೋ ಅಂಥವರಿಗೆ ಮಾತ್ರ ಈ ಕಂದಾಯವನ್ನು ಹಾಕಬೇಕೆಂದು ಯೋಚನೆ ಮಾಡಿದ್ದೇವೆ. ಆದರೆ ಶ್ರೀಮಾನ್ ಚನ್ನ ಬಸಪ್ಪನವರು ಹೇಳಿದಂತೆ ನಮಗೆ ಈ ಕಂದಾಯವನ್ನು ಹಾಕುವುದಕ್ಕೆ ಹಕ್ಕೇ ಇಲ್ಲ ಎಂದು. ನಮಗೆ ಈ ದಿವಸ ಕಾಫಿ, ಟೀ ಮತ್ತು ಏಲಕ್ಕಿ ಮತ್ತಿತರ ಎಸ್ಟೇಟುಗಳಿಂದ ಸರ್ಕಾರಕ್ಕೆ ಒಟ್ಟು ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಆದಾಯ ಬರುತ್ತಿರುವುದರಲ್ಲಿ ಒಂದು ಕೋಟಿ ರೂಪಾಯಿಗಳು ಆ ಎಸ್ಟೇಟಿನವರಿಂದಲೇ ಬರುತ್ತಿದೆ. ಇನ್ನು ವ್ಯವಸಾಯದ ವರಮಾನ ತೆರಿಗೆಯು ಬಾಬಿಂದ ಬರತಕದ್ದು 30 ಲಕ್ಷ ಮಾತ್ರ. ಆದರೆ ಕಳೆದ ಮೂರು ವರ್ಷಗಳಿಂದಲೂ ಮಳೆ ಸರಿಯಾಗಿ ಬಂದಿಲ್ಲ. ಬೆಳೆಗಳು ಸರಿಯಾಗಿ ಆಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಸತ್ಯವಾಗಿ ರಾಜ್ಯಭಾರ ಮಾಡುತ್ತಿಲ್ಲವೆಂದು ಮಳೆ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಯಾವ ಕೆಲಸವನ್ನೇ ಆಗಲಿ ನಾವು ಎಲ್ಲ ಜನರನ್ನು ಒಪ್ಪಿಸಿ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ನಮ್ಮ ಮನ ಮೆಚ್ಚುವಂತೆ ಕೆಲಸಮಾಡಿದ್ದೇವೆ ಒಂದು ವರ್ಷ ಮಳೆ ಬಾರದಿದ್ದರೆ ಅದಕ್ಕೆ ಸರ್ಕಾರ ಕಾರಣವಲ್ಲ. ನಾನು ಮೈಸೂರು ಜಿಲ್ಲೆಯವನು ನನ್ನ ಜಿಲ್ಲೆಯಲ್ಲಿ ಮಳೆ ಬಾರದಿರುವುದು ನನ್ನ ತಪ್ಪಾಗಿದ್ದರೆ ಶ್ರೀಮಾನ್ ಸಿದ್ದವೀರಪ್ಪನವರು ಇರತಕ್ಕ ಚಿತ್ರದುರ್ಗ ಜಿಲ್ಲೆಯಲ್ಲಿ ಏಕೆ ಮಳೆಬರಲಿಲ್ಲ!

ಶ್ರೀ ಆಜೀಜ್ ಶೇಟ್ (ನರಸಿಂಹರಾಜ).—ಮಾನ್ಯ ಮಂತ್ರಿಗಳು ಮಾಡುತ್ತಿರುವ ಭಾಷಣದಲ್ಲಿ ಉಪ್ಪೂ ಇಲ್ಲ ಖಾರವೂ ಇಲ್ಲ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಅದರಲ್ಲಿ ಉಪ್ಪು ಬೆರೆಸುವುದು ಬೇಡ.....

ಶ್ರೀ ಆಜೀಜ್ ಶೇಟ್.—ಅದು ಬರಿ ಒಂದು ಹರಿಕಥೆ—ಅದರಲ್ಲಿ ಸ್ವಾರಸ್ಯವೇನೂ ಇಲ್ಲ.

ಶ್ರೀ ಬಿ ರಾಚಯ್ಯ.—ಇನ್ನು ಖಾದಿ ಸೆಂಟರುಗಳಲ್ಲಿಯೂ ಕೂಡ ನೂಲನ್ನು ತಗೆಯುವ ಕಡೆ ಜನರಿಗೆ ಕೂಲಿಯನ್ನು ಸಿಕ್ಕುವಂತೆ ಮಾಡಲು ಅಲ್ಲಿಗೂ ಹಣವನ್ನು ಒದಗಿಸಿದ್ದೇವೆ. ಪರಿಹಾರ ಕಾಮಗಾರಿಗಳಿಗೆ ಕೆಲಸ ಎಂದರೆ ಬರಿ ಒಂದು ಮಣ್ಣು ಕಲಸ ಮಾತ್ರವೇ ಅಲ್ಲ. ನೂಲಿನಲ್ಲಿ ಬಟ್ಟೆ ಮಾಡತಕ್ಕ ಕೆಲಸಗಳೂ ಇವೆ. ಒಟ್ಟಿನಲ್ಲಿ ಜನರಿಗೆ ಬರಗಾಲದಲ್ಲಿ ಅವರಿಗೆ ಜೀವನಕ್ಕೆ ಮಾರ್ಗ ಮಾಡಲು ಏನಾದೂ ಒಂದು ಕೆಲಸವನ್ನು ಒದಗಿಸಬೇಕು, ಅದು ಸರ್ಕಾರದ ಕರ್ತವ್ಯ. ಚರಕವನ್ನು ಕೆಲಸ ಮಾಡತಕ್ಕವರಿಗೆ ಹಣವನ್ನು ಒದಗಿಸಿ ಅವರಿಗೆ ಸಹಾಯ ಮಾಡಬೇಕೆಂಬುದು ನಮ್ಮ ಆಸೆ. ಅದೇ ರೀತಿ ಗಂಧದ ಕಟ್ಟಿಯನ್ನು ತಯಾರಿಸತಕ್ಕವರು—ಬೀಡಿ ಸುತ್ತತಕ್ಕವರು,

(ಶ್ರೀ ಬಿ. ರಾಚಯ್ಯ)

ಇಂಥವರಿಗೂ ಸಹಾಯವಾಲಯ ರೂಪದಲ್ಲಿ ಹಣವನ್ನು ಒದಗಿಸಿ ಸಹಾಯ ಮಾಡಬೇಕೆಂಬ ಉದ್ದೇಶ ನೆವಗಿದೆ. ಹಿಗೆ ಯಾವ ಯಾವ ದೃಷ್ಟಿಯಿಂದ ಇದನ್ನು ಎದುರಿಸುವುದಕ್ಕೆ ಸಾಧ್ಯವಿದೆಯೋ ಅಂಥಾ ಬಾಬುಗಳಿಗೆಲ್ಲಾ ಹಣವನ್ನೊದಗಿಸಲಾಗಿದೆ. ತುಮಕೂರು ಜಿಲ್ಲೆಯಲ್ಲಿ ಕರಗಳೆಲ್ಲಾ ಒಣಗಿ ರೈತರಿಗೆ ತುಂಬಾ ಕಷ್ಟವಾಗಿದೆ. ಅದನ್ನೆಲ್ಲಾ ಸರ್ಕಾರದವರು ಕೂಸಿ ಕೊಡಬೆಕೆಂದರೆ ಸಾಧ್ಯವಿಲ್ಲ. ಅದರೆ ಅದಷ್ಟು ಅಸಕ್ತ ವಹಿಸಿ ಇಲ್ಲಲ್ಲೆ ಪರಿಹಾರ ಕಾರ್ಯಗಳನ್ನು ಒದಗಿಸಿ ಜನರಿಗೆ ಅನುಕೂಲ ವಾಡಬೇಕೆಂಬುದು ನಮ್ಮ ಉದ್ದೇಶ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಗಳು ಈಗತಾನೆ ಎಲ್ಲಕಡೆಯಿಂದಲೂ ಅರ್ಜಿವಾರು ವರದಿಯನ್ನು ಅಧಿಕಾರಿಗಳಿಂದ ತರಿಸಿಕೊಂಡಿದ್ದೇವೆಂದು ಹೇಳಿದ್ದು ನಿಜವಾದುದಲ್ಲ. ಎಲ್ಲಅವರು ಬೆಳೆ ಸರಿಯಾಗಿ ಆಗಿದ್ದಲೆಂದು ರೆಕ್ಕ ಕೊಟ್ಟಿದ್ದಾರೋ ಅದು ನಿಜವಾದದ್ದಲ್ಲ ಅವರು ಮನೆಯಲ್ಲೇ ಕುಳಿತು ಸುಳ್ಳು ರೆಕ್ಕವನ್ನು ತಯಾರಿಸಿ ಕಳುಹಿಸಿದ್ದಾರೆ. ಅದನ್ನು ಒಂದು ಆಧಾರವಾಗಿ ತೆಗೆದು ಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ—ಪಹಣಿ ಎಕ್ಕಾಣ್ಕ್ಕನ್ನು ಅನುಸರಿಸುವುದರಿಂದ ಕೆಲವು ಕಡೆ ರೈತರಿಗೆ ತೊಂದರೆಯಾಗಬಹುದೆಂದು ಹೇಳಿ ಎಲ್ಲಾ ಕಡೆಗಳಲ್ಲೂ ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟನ್ನು ನಡೆಸಬೇಕೆಂದು ಹೇಳಿದ್ದೇವೆ. ರೈತರಿಂದ ಬರಬೇಕಾದ ಸುಮಾರು 14 ಕೋಟಿ ರೂಪಾಯಿ ಗಳಷ್ಟು ವಾಟರ್‌ರೇಟಿನ್ನು ಇನ್ನೂ ವಸೂರ್ಮಾಡುವುದಕ್ಕಾಗಿಲ್ಲ, ಅದು ಬಾಕಿ ಬಿದ್ದಿದೆ. ಕೆಲವು ಕಡೆ ಕಂದಾಯದ ಬಾಕಿ ಕೂಡ ಬಹಳವಾಗಿ ನಿಂತಿದೆ. ಆದುದರಿಂದ ನಾನು ಕೊಡ ಕಡೆಗಳಲ್ಲೆಲ್ಲಾ ರೈತರಿಗೆ ಸಾಧ್ಯವಾದಮಟ್ಟಿಗೂ ಅದಷ್ಟು ಬಾಕಿಯನ್ನು ಕೊಟ್ಟು ಅದನ್ನು ದಿನ ಕ್ರಮೇಣದಲ್ಲಿ ಕಡವೆ ಮಾಡುತ್ತಾ ಬರಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಆದರೆ ನಿಜವಾಗಿಯೂ ಎಲ್ಲೆಲ್ಲಿ ಮಳೆಯಾಗದೆ ಬೆಳೆಯಾಗಿಲ್ಲವೋ ಅಂಥಾ ಕಡೆಗಳಲ್ಲಿ ರೈತರಿಗೆ ಉದ್ದೇಶ ವಾಗಿ ತೊಂದರೆಯನ್ನು ಕೊಟ್ಟು ಅವರಿಂದ ಕಂದಾಯವನ್ನು ವಸೂರ್ಮಾಡಿ ಹಣದಿಂದಲೇ ಇಲ್ಲಿ ಆಡಳಿತ ನಡೆಸಬೇಕೆ ಬ ಪರಿಸ್ಥಿತಿ ಏನೂ ಬಂದಿಲ್ಲ. ಆದ್ದರಿಂದ ಏನಾ ಕಾರಣ ಸರ್ಕಾರದವರು ಯಾರಿಗೂ ತೊಂದರೆಯನ್ನು ಕೊಡಬೇಕೆ ಬ ಉದ್ದೇಶ ಅವರಿಗಿಲ್ಲ. ಬೆಳೆಯಾಗದ ಕಡೆ ಕಂದಾಯವನ್ನು ತಗ್ಗಿಸಬೆಕೆಂದು ತಿಳಿಸಿದ್ದೇವೆ. ಆದರೆ ಎಲ್ಲೆ ಚೆನ್ನಾಗಿ ಬೆಳೆಯಾಗಿದೆಯೋ ಅಂಥ ಕಡೆಯಲ್ಲಿ ಧಾನ್ಯವನ್ನು ವಸೂರ್ಮಾಡಿ ಅದನ್ನು ಬೆಳೆಯಾಗದ ಪ್ರದೇಶದಲ್ಲಿರುವಂತಹ ಜನರಿಗೆ ಸರಬರಾಜು ಮಾಡುತ್ತಿದ್ದೇವೆ. ಅಷ್ಟೆ. ಅದಷ್ಟು ಹೆಚ್ಚು ಹಣವನ್ನು ಈ ಪರಿಹಾರ ಕಾರ್ಯಗಳಿಗೆ ಒದಗಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಇಷ್ಟು ವಿಷಯಗಳನ್ನು ಮಾನ್ಯ ಸದಸ್ಯರಿಗೆ ತಿಳಿಸಿ ನಾನು ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ವಿಸ್. ಬಂಗಾರಪ್ಪ—ವೇಶದ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಆಣಿ ಬೆಳೆಯಾಗಿದೆ ಎಂದು ತಮ್ಮಲ್ಲಿರತಕ್ಕ ಪಟ್ಟಿಯ ಒಂದೊಂದು ಕಾಪಿಯನ್ನು ಈ ಸಭೆಯ ಮಾನ್ಯ ಸದಸ್ಯರುಗಳಿಗೆಲ್ಲಾ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ?

Mr. SPEAKER—I have received one communication from an Hon'ble Member in answer to my suggestion that Members who have not been able to participate in the discussion may kindly send their points in a chit. He has sent it and he has produced the document which refers to several points. I am passing it on to the Hon'ble Minister for Revenue for his kind and sympathetic consideration.

ಶ್ರೀ ಎ. ಆರ್. ಪಂಚಗಾವಿ (ಅರಬಾವಿ).—ಸ್ವಾಮೀ, ಮಾನ್ಯ ರವೆನ್ಯೂ ಸಚಿವರು ಈಗಾಗಲೇ ಇಂದು ಎಲ್ಲ ರೆವೆನ್ಯೂ ಅಫಿಸರುಗಳ ಒಂದು ಕಾನ್ಫರೆನ್ಸ್‌ನ್ನು ಕರೆದಿದ್ದಾರೆ ಮೈನರು ಇರಿಗೇಷನ್ ಕೆಲಗಳನ್ನು ಮಾಡಿದಾದರೂ ಇದ್ದರೆ ಅವನ್ನು ತೆಗೆದುಕೊಳ್ಳಬೇಡದು ಎನ್ನುವ ಒಂದು ಸತ್ಕಿರ್ಣಯ ಇದೆ ಎಂದು ಹೇಳುತ್ತಿದ್ದಾರೆ. ಆದರೆ ಬರಗಾಲದ ಇಂತಹ ಕಾಲದಲ್ಲಿ ಇಲ್ಲಿ ಶಾಶ್ವತ ಕೆಲಸಗಳನ್ನು ತೆಗೆದುಕೊಂಡು ಹೋಗುವಂತೆ ಕೆಲಸಗಳನ್ನು ಮಾಡಲು ಅನುಕೂಲವಾಗುವ ಪ್ರದೆ. ಇದನ್ನು ಗಮನದಲ್ಲಿಟ್ಟುಕೊಂಡು ಸಹಕಾರ ಶಾಶ್ವತವಾದ ಒಂದು ಆದೇಶವನ್ನು ಕಳುಹಿಸುತ್ತಾರೆಯೇ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಇಂತಹ ಸೂಚನೆ ಕೊಡಲಾಗಿದೆ. ಪಿ. ಡಬ್ಲ್ಯು. ಡಿ. ಡೆಪ್ಯೂಟಿ ಸೆಕ್ರೆಟರಿಗಳು ಇದರ ಬಗ್ಗೆ ಸರ್‌ಕ್ಯುಲರನ್ನು ಕಳುಹಿಸುವ ವ್ಯವಸ್ಥೆ ಮಾಡಿದ್ದಾರೆ. ಇದರ ಜೊತೆಗೆ ಕುಡಿಯುವ ನೀರಿನ ಬಾವಿಗಳು ಎಲ್ಲೆಲ್ಲ ಇಲ್ಲವೋ ಅಲೆಲ್ಲಾ ಬಾವಿಗಳನ್ನು ತೋಡಿಸುವ ಕೆಲಸಕ್ಕೆ ಮೊದಲು ಪ್ರಾಶಸ್ತ್ಯ ಕೊಡಬೆ ಕೆಂದು ಮುಖ್ಯ ಇದಕ್ಕೆ ಬೇಕಾದ ಹಣವನ್ನು ಅಚರಲ್ಲರುವ ಕ್ಷಾಮ ಪರಿಹಾರ ನಿಧಿಯಿಂದ ಖರ್ಚು ಮಾಡಬಹುದು ಎಂಬ ನಿನ್ನೆ ತೀರ್ಮಾನವನ್ನು ಕೈಗೊಂಡಿದ್ದೇವೆ ಮತ್ತು ಕುಡಿಯುವುದಕ್ಕೆ ನೀರನ್ನು ಎಲ್ಲ ಕಡೆಗೂ ಒದಗಿಸುವ ವ್ಯವಸ್ಥೆ ಮಾಡಬೇಕೆಂದೂ ಹೇಳಲಾಗಿದೆ.

CALLING ATTENTION TO A MATTER OF URGENT PUBLIC IMPORTANCE *re*: INCREMENTS TO THE UNTRAINED TEACHERS

Sri M. NAGAPPA (Raichur).—Sir, I beg to call the attention of the Minister for Education to the question of eligibility of untrained teachers to get increments in their time scale pay.

† Sri K. V. SHANKARA GOWDA (Minister for Education).—Sir, the question of eligibility of untrained teachers to get increments in their time scale of Pay is already the subject matter of writ petitions filed by certain teachers of the Education Department in the High Court of Mysore. The matter is sub-judice.

MYSORE APPROPRIATION (No. 4) BILL, 1967

Introduction

Mr. SPEAKER.—Now Appropriation Bills. I may mention to the House that the necessary message from the Governor recommending these Bills has been received and it is laid on the Table.

Sri RAMAKRISHNA HEGDE (Minister for Finance).—Sir, I introduce the Mysore Appropriation (No. 4) Bill, 1967.

Mr. SPEAKER.—The Mysore Appropriation (No. 4) Bill, 1967 is introduced.

MYSORE APPROPRIATION (No. 5) BILL, 1967

Introduction

Sri RAMAKRISHNA HEGDE.—I beg to introduce the Mysore Appropriation (No. 5) Bill, 1967.

Mr. SPEAKER.—The Mysore Appropriation (No. 5) Bill, 1967 is introduced.

† Indicates that the remarks or speeches have not been revised by the member concerned